MAY 01, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಬೀದರ ಜಿಲ್ಲೆ ಬಸವಕಲ್ಯಾಣದ, ಅನುಭವ ಮಂಟಪ, ಶೀಘ್ರ ಲೋಕಾರ್ಪಣೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- 'ಒಂದು ರಾಜ್ಯ ಒಂದು ಗ್ರಾಮೀಣ ಬ್ಯಾಂಕ್'; ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಬಳ್ಳಾರಿಯಲ್ಲಿ ಇಂದು, ಅಸ್ತಿತ್ವಕ್ಕೆ.
- ಹುಬ್ಬಳ್ಳಿ ಸಾರಿಗೆ ಸೇವೆಗೆ 75; ಇಂದು, ಅಮೃತ ವರ್ಷಾಚರಣೆ ಸಂಭ್ರಮ.
- 'ವೇವ್ಸ್' – ಮುಂಬೈಯಲ್ಲಿ ಇಂದು ಬೆಳಗ್ಗೆ 10.30ಕ್ಕೆ, ಪ್ರಧಾನಮಂತ್ರಿ ಚಾಲನೆ.
- ಇಂದು ಮೇ 1, ವಿಶ್ವ ಕಾರ್ಮಿಕರ ದಿನ; ಶ್ರಮಜೀವಿಗಳಿಗೆ ಗೌರವಾರ್ಪಣೆ.

<><><>

ಈಗ ವಾರ್ತೆಗಳ ವಿವರ

<><><>

ಗೋ.ರು. ಚನ್ನಬಸಪ್ಪ ಸಮಿತಿ ವರದಿಯಂತೆ, ಅನುಭಾವಿಗಳ ಅನುಭವ ಮಂಟಪ, ಬೀದರ ಜಿಲ್ಲೆ, ಬಸವಕಲ್ಯಾಣದ ತಿಪ್ರಾಂತದಲ್ಲಿ, ಶೀಘ್ರ ಲೋಕಾರ್ಪಣೆಗೊಳ್ಳಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದಲ್ಲಿ, ಶರಣರ ವೈಭವ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ರಾಷ್ಟ್ರೀಯ ಬಸವ ಪುರಸ್ಕಾರವನ್ನು, ಎಸ್.ಆರ್. ಗುಂಜಾಳ ಅವರಿಗೆ ಪ್ರದಾನಿಸಿ, ಅವರು ಮಾತನಾಡಿದರು. ಬಸವಣ್ಣನವರನ್ನು ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು, ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ನಾಮಕಾರಣ ಮಾಡಿದ್ದು, ತಮ್ಮ ಸರ್ಕಾರ ಎಂದರು. ಬಸವಣ್ಣನವರ ಆಶಯಗಳು, ಮೌಲ್ಯಗಳು, ಅಂಬೇಡ್ಕರ್ ಅವರ ಸಂವಿಧಾನದ ಆಶಯ ಮತ್ತು ಮೌಲ್ಯಗಳು ಒಂದೇ ಆಗಿವೆ ಎಂದು, ಮುಖ್ಯಮಂತ್ರಿ ಪ್ರತಿಪಾದಿಸಿದರು.

<><><>

ಬಸವಣ್ಣನವರು ಮತ್ತು ಬಸವಾದಿ ಶರಣರ ವಚನಗಳನ್ನು, ಇಡೀ ವಿಶ್ವಕ್ಕೆ ಪರಿಚಯಿಸುವ ನಿಟ್ಟಿನಲ್ಲಿ, ಕಲಬುರಗಿಯಲ್ಲಿ ವಚನ ಮಂಟಪ ನಿರ್ಮಿಸಲಾಗುವುದು ಎಂದು, ಕೌಶಲಾಭಿವೃದ್ಧಿ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಕಲಬುರಗಿಯಲ್ಲಿ ಹೇಳಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಜೊಯಿಡಾ ತಾಲೂಕು, ಉಳವಿಯ ಶ್ರೀ ಚನ್ನಬಸವೇಶ್ವರ ದೇವಾಲಯ, ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದ ಶ್ರೀ ಸಂಗಮೇಶ್ವರ ದೇಗುಲ, ಬಸವಣ್ಣನವರ ಜನ್ಮಸ್ಥಳ, ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿಯ ಬಸವ ಸ್ಮಾರಕದಲ್ಲಿ, ಧಾರವಾಡದ ಶ್ರೀ ಉಳವಿ ಚನ್ನಬಸವೇಶ್ವರ ದೇವಸ್ಥಾನದಲ್ಲಿ, ಶ್ರೀ ಬಸವೇಶ್ವರರ 894ನೇ ಜಯಂತಿ ಅಂಗವಾಗಿ, ವಿಶೇಷ ಪೂಜಾ ಕೈಂಕರ್ಯಗಳು ಶ್ರದ್ಧಾ, ಭಕ್ತಿಯಿಂದ ಜರುಗಿದವು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಹಾತ್ಮ ಬಸವೇಶ್ವರರ ದೃಷ್ಟಿಕೋನ ಮತ್ತು ವಂಚಿತರನ್ನು ಮೇಲೆತ್ತಲು ಅವರ ಅವಿಶ್ರಾಂತ ಪ್ರಯತ್ನಗಳು, ತಮಗೆ ಸದಾ ಮಾರ್ಗದರ್ಶನ ನೀಡುತ್ತಿವೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ಮೋದಿ ಧ್ವನಿ 30 ಸೆಕೆಂದುಗಳು

<><><>

ಬೆಂಗಳೂರಿನ ಬಸವ ಸಮಿತಿ, ಭಕ್ತಿ ಭಾಂಡಾರಿ ಶ್ರೀ ಬಸವಣ್ಣ ಸೇರಿದಂತೆ, ಸಮಕಾಲೀನ ಶರಣರ, 2 ಸಾವಿರದ 3 ನೂರು ವಚನಗಳನ್ನು ಸಂಗ್ರಹಿಸಿ, ವಿವಿಧ ಭಾಷೆಗಳಿಗೆ ಅನುವಾದಿಸಿ, 23 ಸಂಪುಟಗಳನ್ನು ಪ್ರಕಟಿಸಿದೆ.

ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ, ಬಸವ ಸಮಿತಿ ರಾಷ್ಟ್ರೀಯ ಅಧ್ಯಕ್ಷರಾದ ಅರವಿಂದ ಜತ್ತಿ.

<><><>

ಅರವಿಂದ ಜತ್ತಿ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

'ಒಂದು ರಾಜ್ಯ ಒಂದು ಗ್ರಾಮೀಣ ಬ್ಯಾಂಕ್' ಎಂಬ ನೀತಿ ಅನ್ವಯ, ಕೇಂದ್ರ ಸರ್ಕಾರ ಹೊರಡಿಸಿದ ಅಧಿಸೂಚನೆ ಹಿನ್ನೆಲೆ, ಧಾರವಾಡದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ಬಳ್ಳಾರಿಯಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದ್ದ, ಕರ್ನಾಟಕ ಗ್ರಾಮೀಣ ಬ್ಯಾಂಕ್ ವಿಲೀನಗೊಂಡು, ಇಂದು, ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಉದಯಿಸಲಿದೆ. ನೂತನ ಬ್ಯಾಂಕಿನ ಪ್ರಧಾನ ಕಚೇರಿ, ಬಳ್ಳಾರಿಯಲ್ಲಿ ಇಂದು ಕಾರ್ಯಾರಂಭಿಸಲಿದೆ. ನೂತನ ಗ್ರಾಮೀಣ ಬ್ಯಾಂಕ್, ಸರ್ಕಾರಿ ಸ್ವಾಮಿತ್ವದಲ್ಲೇ ಮುಂದುವರಿಯಲಿದೆ. ಕೇಂದ್ರ ಸರ್ಕಾರ ಶೇಕಡ 50, ರಾಜ್ಯ ಸರ್ಕಾರ ಶೇಕಡ 15 ಮತ್ತು ಕೆನರಾ ಬ್ಯಾಂಕ್ ಶೇಕಡ 35 ರಷ್ಟು ತಮ್ಮ ಪಾಲುದಾರಿಕೆಯನ್ನು ಯಥಾಸ್ಥಿತಿ ಕಾಯ್ದುಕೊಳ್ಳಲಿವೆ. ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಸಾರಥ್ಯವನ್ನು, ಶ್ರೀಕಾಂತ ಭಂಡಿವಾಡ ವಹಿಸಲಿದ್ದಾರೆ.

<><><>

ಇಂದಿನ ಕರ್ನಾಟಕ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ, ಅಂದಿನ ಹುಬ್ಬಳ್ಳಿ ಸಾರಿಗೆ ಸೇವೆಗೆ, ಅಮೃತ ವರ್ಷಾಚರಣೆ ಸಂಭ್ರಮ. ಇಂದಿಗೆ 75ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸ್ವಾತಂತ್ರ್ಯ ನಂತರ ಸ್ಥಾಪನೆಗೊಂಡ, ಬಾಂಬೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬಿ.ಎಸ್.ಆರ್.ಟಿ.ಸಿ., 1951 ಮೇ 1 ರಂದು, ಹುಬ್ಬಳ್ಳಿಯ ನಾಯಕ್ ಕಟ್ಟಡದಲ್ಲಿ, ಉಪ ವಿಭಾಗದ ಕಚೇರಿ ಕಾರ್ಯಾರಂಭಿಸಿತು.

<><><>

ಗದಗ, ಲಕ್ಷ್ಮೇಶ್ವರ, ಸವಣೂರು ಹಾಗೂ ಹುಬ್ಬಳ್ಳಿ ಡಿಪೊ ಈ ವಿಭಾಗಕ್ಕೆ ಸೇರಿದ್ದವು. ಕರ್ನಾಟಕ ಏಕೀಕರಣದ ರೂವಾರಿ, ಗದಗಿನ ಶಾಂತಪ್ಪಣ್ಣ ಯೆಳಮಲಿ, ಗದಗ ಡಿಪೊಕ್ಕೆ ಪ್ರಾಮುಖ್ಯತೆ ನೀಡಿದ್ದರು.

<><><>

1951ರಲ್ಲಿ ಜೆ.ಆರ್.ಇರಾಣಿ ಡೆಪ್ಯುಟಿ ಡಿವಿಜನಲ್ ಕಂಟ್ರೋಲರ್ ಆಗಿದ್ದರು. ಮೇಜರ್ ಜನರಲ್ ಯಂಗ್, ಜನರಲ್ ಮ್ಯಾನೇಜರ್, ಪ್ಯಾಟಿನ್‌ಸನ್ ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಹಾಗೂ ಆರ್.ಇ.ವೇಟ್ಸ್ ಚೀಫ್ ಟ್ರಾಫಿಕ್ ಮ್ಯಾನೇಜರ್ ಆಗಿದ್ದರು.

<><><>

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕೆ.ಎಸ್.ಆರ್.ಟಿ.ಸಿ.ಯ ನಿವೃತ್ತ ಆಡಳಿತಾಧಿಕಾರಿ, 97 ವರ್ಷಗಳ ಹಿರಿಯರು, ಧಾರವಾಡದ ರಾಮಚಂದ್ರ ಧೋಂಗಡಿ.

<><><>

ರಾಮಚಂದ್ರ ಧೋಂಗಡಿ ಧ್ವನಿ 30 ಸೆಕೆಂದುಗಳು

<><><>

ವಿಶ್ವ ಶ್ರಾವ್ಯ, ದೃಶ್ಯ ಮತ್ತು ಮನೋರಂಜನಾ ಶೃಂಗಸಭೆ, 'ವೇವ್ಸ್', ಮುಂಬಯಿಯ, ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ, ಇಂದು ಬೆಳಗ್ಗೆ 10.30ಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ, ಉದ್ಘಾಟಿಸಲಿದ್ದಾರೆ.

ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಶೃಂಗಸಭೆ, ಶ್ರವಣ–ದೃಶ್ಯ ಮತ್ತು ಮನೋರಂಜನಾ ಉದ್ಯಮದ ಭವಿಷ್ಯದ ಕುರಿತು, ಚರ್ಚೆಗಳಿಗೆ ಜಾಗತಿಕ ವೇದಿಕೆ ಒದಗಿಸಲಿದೆ.

ಉದಯೋನ್ಮುಖ ಪ್ರತಿಭೆಗಳ ಮತ್ತು ಹೊಸ ತಲೆಮಾರಿನ ಕಥನ ಶೈಲಿಗಳ ಪ್ರದರ್ಶನಗಳಿಗೆ ವೇದಿಕೆಯಾಗಿ, ಶೃಂಗಸಭೆ ಕಾರ್ಯನಿರ್ವಹಿಸಲಿದೆ.

<><><>

ವೇವ್ಸ್ ಧ್ಯೇಯ ಸಂಗೀತ 20 ಸೆಕೆಂದುಗಳು

<><><>

ನೂರು ದೇಶಗಳಿಂದ, ಐದು ಸಾವಿರ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಮನೋರಂಜನಾ ನವೋದ್ಯಮಗಳು ತಮ್ಮ ಆಲೋಚನೆಗಳನ್ನು ಜಾಗತಿಕ ಪ್ರೇಕ್ಷಕರಿಗೆ ಪ್ರಸ್ತುತ ಪಡಿಸಲು ಮತ್ತು ಹೂಡಿಕೆದಾರರು, ಉದ್ಯಮದ ನಾಯಕರೊಂದಿಗೆ ಸಂಪರ್ಕ ಸಾಧಿಸುವ ಅವಕಾಶವನ್ನು ಒದಗಿಸಲಿದೆ. ಚಲನಚಿತ್ರರಂಗದ ಪ್ರಸಿದ್ಧ ನಟರು, ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

<><><>

ಇಂದು ಮೇ 1. ಅಂತಾರಾಷ್ಟ್ರೀಯ ಕಾರ್ಮಿಕರ ದಿನ. ಕಾರ್ಮಿಕರು ಮತ್ತು ಅವರ ಕೊಡುಗೆಗಳನ್ನು ಗೌರವಿಸುವ, ಜಾಗತಿಕ ದಿನಾಚರಣೆ. ಭಾರತದಲ್ಲಿ, ಮೇ 1ನೇ ತಾರೀಖು, ಅಂತಾರಾಷ್ಟ್ರೀಯ 'ಶ್ರಮಿಕ್ ದಿವಸ್' ಅಥವಾ 'ಕಾಮಗರ್ ದಿನ' ಎಂದು, ಕರೆಯಲಾಗುತ್ತದೆ.

<><><>

ಅಂತಾರಾಷ್ಟ್ರೀಯ ಕಾರ್ಮಿಕ ದಿನ, 1886 ರಲ್ಲಿ ಷಿಕ್ಯಾಗೋದಲ್ಲಿ ನಡೆದ, ಹೇಮಾರ್ಕೆಟ್‌ನ 8 ತಾಸುಗಳ ಸತತ ವ್ಯವಹಾರ ದಿನದ ವಿರುದ್ಧ, ಕಾರ್ಮಿಕರು ಪ್ರತಿಭಟಿಸಿದ, ಸ್ಮರಣಾರ್ಥ ಆಚರಿಸಲಾಗುತ್ತದೆ.

<><><>

ಕಾರ್ಮಿಕರ ದಿನದ ಹಿನ್ನೆಲೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, 12 ಸಾವಿರದ 692 ಪೌರ ಕಾರ್ಮಿಕರಿಗೆ, ಸೇವಾ ಖಾಯಮಾತಿ ಪತ್ರ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ತಿಳಿಸಿದ್ದಾರೆ. ಇಂದು ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ, ಶ್ರಮ ಜೀವಿಗಳನ್ನು ಗೌರವಿಸಲಾಗುವುದು ಎಂದು, ಎಕ್ಸ್ ಮಾಧ್ಯಮದಲ್ಲಿ, ಪ್ರಕಟಿಸಿದ್ದಾರೆ.

<><><>

ದೇಶಾದ್ಯಂತ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ, 2025ರ ನೀಟ್ ಪರೀಕ್ಷೆಯನ್ನು, ಈ ತಿಂಗಳ 4 ರಂದು, ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ಆಯೋಜಿಸಿದೆ. ರಾಜ್ಯದಲ್ಲಿ ಒಟ್ಟು 381 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. 1 ಲಕ್ಷದ 49 ಸಾವಿರ ವಿದ್ಯಾರ್ಥಿಗಳು, ನೀಟ್ ಪರೀಕ್ಷೆಗೆ ಹಾಜರಾಗಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹುಬ್ಬಳ್ಳಿಯಲ್ಲಿ ನಡೆದ ಬಾಲಕಿ ಹತ್ಯೆ ಹಾಗೂ ಬಂಧಿತ ಆರೋಪಿಯ ಎನ್‌ಕೌಂಟರ್ ಸಾವಿನ ಕುರಿತಂತೆ, ವರದಿ ಸಲ್ಲಿಸಲು, ನಾಲ್ಕು ವಾರಗಳ ಗಡುವಿನೊಂದಿಗೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಜ್ಯ ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ, ನೋಟಿಸ್ ನೀಡಿದೆ.

<><><>

ಆರ್ಥಿಕವಾಗಿ ಸುದೃಢವಾಗಿದ್ದ ರಾಜ್ಯವನ್ನು, 5 ದಶಾಂಶ 5 ಲಕ್ಷ ಕೋಟಿ ಸಾಲದ ಹೊರೆಗೆ ದಬ್ಬಿದ ಸಾಧನೆಯ ಪ್ರದರ್ಶನಾರ್ಥ, ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆಯೇ? ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ಪ್ರಶ್ನಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲೆ, ಕುದುರೆಮುಖ ವನ್ಯಜೀವಿ ವಿಭಾಗ, ಚಾರಣ ಸ್ಥಳಗಳಿಗೆ, ಇಂದಿನಿಂದ ಪ್ರವಾಸಿಗರಿಗೆ ಅವಕಾಶ ಕಲ್ಪಿಸಿದೆ. ಜಾಲತಾಣ aranya vihara.karnataka.gov.in ನಲ್ಲಿ ಹೆಸರು ನೊಂದಾಯಿಸಿ, ಭೇಟಿ ನೀಡಬಹುದು. (36) (ಉಡುಪಿ/23)

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬೀದರ ಜಿಲ್ಲೆ ಬಸವಕಲ್ಯಾಣದ, ಅನುಭವ ಮಂಟಪ, ಶೀಘ್ರ ಲೋಕಾರ್ಪಣೆ – ಮುಖ್ಯಮಂತ್ರಿ ಸಿದ್ದರಾಮಯ್ಯ.

- 'ಒಂದು ರಾಜ್ಯ ಒಂದು ಗ್ರಾಮೀಣ ಬ್ಯಾಂಕ್'; ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕ್, ಬಳ್ಳಾರಿಯಲ್ಲಿ ಇಂದು, ಅಸ್ತಿತ್ವಕ್ಕೆ.
- ಹುಬ್ಬಳ್ಳಿ ಸಾರಿಗೆ ಸೇವೆಗೆ 75; ಇಂದು, ಅಮೃತ ವರ್ಷಾಚರಣೆ ಸಂಭ್ರಮ.
- 'ವೇವ್ಸ್' – ಮುಂಬೈಯಲ್ಲಿ ಇಂದು ಬೆಳಗ್ಗೆ 10.30ಕ್ಕೆ, ಪ್ರಧಾನಮಂತ್ರಿ ಚಾಲನೆ.
- ಇಂದು ಮೇ 1, ವಿಶ್ವ ಕಾರ್ಮಿಕರ ದಿನ; ಶ್ರಮಜೀವಿಗಳಿಗೆ ಗೌರವಾರ್ಪಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>